**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 116/2023**

| | | | |
|---|---|---|---|
| **ಹೆಸರು** | **:** | **ಹಣಮಂತ** | **ಚಾ.ಸಾ.1** |
| **ತಂದೆಯ ಹೆಸರು** | **:** | **ಶಿವಪ್ಪ** | **ಪ್ರಾ.ಸಾ.1** |
| **ವಯಸ್ಸು** | **:** | **54 ವರ್ಷ** | **ದಿನಾಂಕಃ 24-06-2024** |
| **ಉದ್ಯೋಗ** | **:** | **ಕುರಿ ಕಾಯುವ ಕೆಲಸ** | |
| **ವಾಸಸ್ಥಳ** | **:** | **ನಾಗಾ ಇದಲಾಯಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-6 ನನಗೆ ಗೊತ್ತು. ಚಾಸಾ-7 ಮತ್ತು 8 ರವರು ನನಗೆ ಗೊತ್ತಿಲ್ಲ. ಈಗ 2 ವರ್ಷಗಳ ಹಿಂದೆ ರಾತ್ರಿ ಸಮಯಕ್ಕೆ ನಾಗಾಇದಾಲಯಿದಲ್ಲಿರುವ ನಮ್ಮ ಮನೆಯ ಕೊಠಡಿಯಿಂದ ಒಟ್ಟು 28 ಆಡುಗಳಲ್ಲಿ 5 ಆಡು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಮರುದಿನ ಬೆಳಗ್ಗೆ ಕಳ್ಳತನವಾದ ಬಗ್ಗೆ ಚಿಂಚೋಳಿ ಪೋಲಿಸ ಠಾಣೆಗೆ ಹೋಗಿ ದೂರು ನೀಡಿದ್ದೇನೆ. ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ 2-3 ತಿಂಗಳು ಆದ ನಂತರ ಪೋಲಿಸರು ನನಗೆ ಪೋಲಸ ಠಾಣೆಗೆ ಕರೆಸಿ 3 ಆಡುಗಳನ್ನು ನನಗೆ ನೀಡಿರುತ್ತಾರೆ. ಸದರಿ ಮೂರು ಆಡುಗಳು ನನ್ನದಲ್ಲ. ಪೋಲಿಸ ಠಾಣೆಯಲ್ಲಿ ನನಗೆ ಕಳ್ಳತನ ಮಾಡಿದ ವ್ಯಕ್ತಿಗಳನ್ನು ತೋರಿಸಿರುವುದಿಲ್ಲ. ನನ್ನ ಆಡುಗಳನ್ನು ಕಡೆದು ಹಾಕಿರುತ್ತಾರೆ ಎಂದು ಹೇಳಿ ಮೂರು ಆಡುಗಳನ್ನು ನನಗೆ ಕೊಟ್ಟು ಕಳುಹಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ನೋಡಿಲ್ಲ. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಮರುಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ಪೋಲಿಸರು ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಇವರು ಇರಬಹುದು ಎಂದು ನುಡಿಯುತ್ತಾರೆ. ಪೋಲಿಸ ಠಾಣೆಯಲ್ಲಿ ಆರೋಪಿತರು ತಾವು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಆರ್.ಎಮ್.ವಿ ವಕೀಲರಿಂದಃ-</u>**

ನನ್ನ ಆಡುಗಳು ಕಳ್ಳತನವಾದ ಬಗ್ಗೆ ಮತ್ತು ನನಗೆ ಮರುಳಿಸಿದ ಬಗ್ಗೆ ಸುಳ್ಳು ಸಾಕ್ಷಿ ನುಡಿದಿದ್ದೆನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕಲಬುರಗಿಯಲ್ಲಿ ಸೆಂಟ್ರೇಂಗ್ ಕೆಲಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿ ಹೋಟೆಲ್ ನಲ್ಲಿ ಕೆಲಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿ ಈಗ ಮೃತಪಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಪೋಲಿಸ ಠಾಣೆಯಲ್ಲಿ ಆರೋಪಿತರನ್ನು ನೋಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿದ್ದೇನೆ ಎಂದರೆ ಸರಿಯಲ್ಲ. ನಾಗಾಇದಲಾಯಿದಿಂದ ಚಿಂಚೋಳಿ ಮಾರ್ಗವಾಗಿ ಬೆಂಕೆಪಳ್ಳಿ ಹೋಗಲು 65 ಕಿ.ಮೀ. ದಾರಿ ಇದೆ ಎಂದರೆ ಸರಿ.ಈಗ ಪ್ರಕರಣಕ್ಕೆ ಮತ್ತು ನನಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆಡುಗಳು ಯಾರು ಕಳ್ಳತನ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**